


ಆರ್‌ಸಿಬಿ ಗೆಲುವಿನ ಸಂಭ್ರಮ

# ಅನುಭವಿಗಳ ಮೇಲಾಟ

**ಡಬ್ಲ್ಯೂಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಮತ್ತೊಮ್ಮೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಉರುಫ್ ಆರ್‌ಸಿಬಿ ಚಾಂಪಿಯನ್ ಆಗಿದೆ. ಸ್ಮೃತಿ ಹಾಗೂ ನದೀನ್ ಅವರಂತಹ ಅನುಭವಿಗಳ ಜೊತೆಗೆ ಬೆಲ್ ಅವರಂತಹ ಹೊಸ ಚಿಗುರು ಮಿಂಚಿದ ಟೂರ್ನಿ ಇದು. ಅಂತಿಮ ಪಂದ್ಯದಲ್ಲಿ ಹೋರಾಟ ತೋರಿದರೂ ಡೆಲ್ಲಿ ಕ್ಯಾಪಿಟಲ್ಸ್ ಅರ್ಥಾತ್ ಡಿ.ಸಿ. ತಂಡಕ್ಕೆ ಮತ್ತೊಮ್ಮೆ ಸೋಲಿನ ಕಹಿಯೇ ಸಿಕ್ಕಿತು.**

■ ವಿಶಾಖ ಎನ್.

ಚುಟುಕು ಕ್ರಿಕೆಟ್ ಕಳೆಗಟ್ಟತೊಡಗಿ ದಶಕವೇ ಉರುಳಿದೆ. ಇದೀಗ ಮಹಿಳೆಯರ ತಂಡಗಳ ಕಡೆಗೂ ಪ್ರೇಕ್ಷಕರು ಕುತೂಹಲದ ನೋಟ ಬೀರಿರುವುದು ವುಮೆನ್ಸ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ (ಡಬ್ಲ್ಯೂಪಿಎಲ್) ಸ್ಪಷ್ಟವಾಯಿತು. ಗುಣಮಟ್ಟದ ವಿಷಯದಲ್ಲಿ ವರ್ಷದಿಂದ ವರ್ಷಕ್ಕೆ ಜಿಗಿತ ಕಾಣುತ್ತಿರುವುದಕ್ಕೆ ಆಟಗಾರ್ತಿಯರ ಆತ್ಮವಿಶ್ವಾಸ ವೃದ್ಧಿಯಾಗುತ್ತಿರುವುದೇ ಸಾಕ್ಷಿ. ಅದರಲ್ಲೂ ವಿಶ್ವದ ದಿಗ್ಗಜ ಬ್ಯಾಟರ್‌ಗಳ ಜೊತೆಗೆ ಪಳಗುತ್ತಲೇ ತಮ್ಮತನದ ದರ್ಶನ ಮಾಡಿಸುವ ಜಾಣ್ಮೆ ಎದ್ದುಕಾಣುತ್ತಿದೆ.

ಈ ಡಬ್ಲ್ಯೂಪಿಎಲ್ ಋತುವಿನಲ್ಲಿ ಅತಿ ಹೆಚ್ಚು ರನ್ ಗಳಿಸಿ ಕಿತ್ತಳೆ ಟೋಪಿ ಧರಿಸಿದವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸ್ಮೃತಿ ಮಂದಾನ. ಅವರು ಫೈನಲ್ ಪಂದ್ಯದಲ್ಲಿ ಫೆಬ್ರುವರಿ 5ರಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿರುದ್ಧ ಆಡಿದ ರೀತಿ ಚಿತ್ತಾಕರ್ಷಕ. 41 ಎಸೆತಗಳಲ್ಲಿ 87 ರನ್‌ಗಳನ್ನು ಮಹತ್ವದ ಈ ಪಂದ್ಯದಲ್ಲಿ ಅವರು ಗಳಿಸಿದರು. 212ಕ್ಕೂ ಹೆಚ್ಚಿನ ಸ್ಟ್ರೈಕ್ ರೇಟ್‌ನ ಈ ಇನಿಂಗ್ಸ್‌ನಲ್ಲಿ 12 ಬೌಂಡರಿಗಳು ಹಾಗೂ 3 ಸಿಕ್ಸರ್‌ಗಳು ಇದ್ದವು. ಜಾರ್ಜಿಯಾ ವೋಲ್ ಜೊತೆಗೂಡಿ ಎರಡನೇ ವಿಕೆಟ್‌ಗೆ 165 ರನ್ ಸೇರಿಸಿದ್ದೇ ಆರ್‌ಸಿಬಿ ಗೆಲುವಿಗೆ ಮುನ್ನುಡಿ ಬರೆಯಿತು. ಒಟ್ಟು 377 ರನ್‌ಗಳನ್ನು ಸ್ಮೃತಿ ಈ ಡಬ್ಲ್ಯೂಪಿಎಲ್‌ನಲ್ಲಿ ದಾಖಲಿಸಿದರು. ಮುಂಬೈ ಇಂಡಿಯನ್ಸ್ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ 342 ರನ್‌ಗಳೊಡನೆ ಎರಡನೇ ಸ್ಥಾನದಲ್ಲಿ ಗಮನಸೆಳೆದರು. ಭಾರತ ಕ್ರಿಕೆಟ್ ತಂಡದ ಇಬ್ಬರು ಪ್ರಮುಖ ಆಟಗಾರ್ತಿಯರು ಹೀಗೆ ಚುಟುಕು ಕ್ರಿಕೆಟ್‌ನ ವೇಗಕ್ಕೆ ಹೊಂದಿಕೊಂಡು ಆಡುತ್ತಿರುವುದು ಅವರ ಅನುಭವದ ಕಾಣ್ಕೆ ಎಂಥದ್ದು ಎಂಬುದಕ್ಕೆ ಹಿಡಿದ ಕನ್ನಡಿ.

ಆರ್‌ಸಿಬಿ ತಂಡಕ್ಕೆ ಈ ಋತುವಿನಲ್ಲಿ ಹೊಸ ಸೇರ್ಪಡೆಯಾಗಿ ಬೆನ್ನೆಲುಬಾದ ಆಟಗಾರ್ತಿ, ಇಂಗ್ಲೆಂಡ್‌ನ ಲಾರೆನ್ ಬೆಲ್. ಕೇವಲ 5.52ರ ಸರಾಸರಿಯಲ್ಲಿ ಅವರು ರನ್ ನೀಡಿರುವುದು ಚುಟುಕು ಕ್ರಿಕೆಟ್‌ನಲ್ಲಿ ಸ್ಟ್ರೈಕ್ ಬೌಲಿಂಗ್ ಹೇಗಿರಬೇಕು ಎನ್ನುವುದರ